ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

ಸಿಸಿ 37/2017 ಸಿಡಬ್ಲ್ಯೂ ಃ 3 ಪಿ ಡಬ್ಲ್ಯೂ ಃ 4

| | |
|---|---|
| ಹೆಸರು | ರವಿಕುಮಾರ್ |
| ತಂದೆಯ ಹೆಸರು | ಕೃಷ್ಣಪ್ಪ |
| ವಯಸ್ಸು | 45 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಬ್ರಹ್ಮಪುರ ಗ್ರಾಮ |

ದಿನಾಂಕಃ 01.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಚಾಸಾ 1 ಮರಣ ಹೊಂದಿರುತ್ತಾರೆ. ಆತ ನನ್ನ ಭಾವನಾಗಬೇಕು. ಚಾಸಾ 2 ನನ್ನ ಪತ್ನಿ. ಚಾಸಾ4 ನನ್ನ ತಾಯಿ, ಚಾಸಾ 5 ನನ್ನ ಅಕ್ಕನ ಮಗ. ಚಾಸಾ6 ನನ್ನ ಅಕ್ಕ. ಚಾಸಾ 7 ರಿಂದ 11 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. 4 ನೇ ಆರೋಪಿ ಈಗ ಮರಣ ಹೊಂದಿರುತ್ತಾನೆ. 2017 ರಲ್ಲಿ ನಾನು ಮನೆಯಲ್ಲಿದ್ದಾಗ ನನ್ನ ಪತ್ನಿ ಚಾಸಾ2 ಕಸ ಬಿಸಾಡಲು ಕೆಳಗೆ ರಸ್ತೆಗೆ ಹೋದಾಗ 2 ನೇ ಆರೋಪಿ ಮತ್ತು ನನ್ನ ಮೃತ ಭಾಗ ಜಗಳ ಮಾಡುತ್ತಿರುವುದನ್ನು ನೋಡಿರುತ್ತಾಳೆ. ಆಕೆ ಮನೆಗೆ ಬಂದು ನನಗೆ ವಿಷಯ ತಿಳಿಸಿದಳು. ನಾನು ಮತ್ತು ಚಾಸಾ 2, 4 ರಿಂದ 6 ಕೆಳಗೆ ಹೋಗಿ ಸಮಧಾನ ಮಾಡಿ ನನ್ನ ಭಾವನಾದ ಚಾಸಾ 1 ರವರನ್ನು ಮನೆಗೆ ಕರೆದುಕೊಂಡು ಬಂದಿರುತ್ತೇನೆ. ಅದೇ ದಿನ ಆರೋಪಿತರೆಲ್ಲರು ಏಕಾಏಕಿ ನಮ್ಮ ಮನೆಯ ಹೊರಗಡೆ ಬಂದಿರುತ್ತಾರೆ. ಆಗ ನಾವೆಲ್ಲರೂ ಹೊರಗೆ ಇದ್ದೆವು. 2 ನೇ ಆರೋಪಿ ನಂಜುಂಡ ನನ್ನ ಭಾವನ ತಲೆಗೆ ರಿಪೀಸ್ ಪಟ್ಟಿಯಿಂದ ಹೊಡೆದಿರುತ್ತಾರೆ. ನಂತರ 2 ನೇ ಆರೋಪಿ ನಂಜುಂಡ ನನ್ನ ಅಕ್ಕನ ಮಗ ನಿತೀನ್ ಗೆ ರಿಪೀಸ್ ಪಟ್ಟಿಯಿಂದ ಅವನ ತಲೆಗೆ ಹೊಡೆದಿರುತ್ತಾರೆ. ಚಾಸಾ 1 ರವರಿಗೆ

ತಲೆಗೆ ಪೆಟ್ಟಾಗಿ ರಕ್ತ ಬಂದಿರುತ್ತದೆ. ಚಾಸಾ 5 ರವರಿಗೆ ತಲೆಗೆ ಪೆಟ್ಟಾಗಿ ತಲೆ ಒಪನ್ ಆಗಿರುತ್ತದೆ ಹಾಗೂ ತೀವ್ರ ಗಾಯವಾಗಿ ರಕ್ತ ಬಂದಿರುತ್ತದೆ. 1 ನೇ ಆರೋಪಿ ನಾಗೇಂದ್ರ ನನ್ನ ತಾಯಿಯನ್ನು ಕಾಲಿನಿಂದ ಒದ್ದಿರುತ್ತಾನೆ. 1 ನೇ ಆರೋಪಿ ಮತ್ತು 3 ನೇ ಆರೋಪಿ ನನ್ನ ಕುತ್ತಿಗೆ ಪಟ್ಟಿ ಹಿಡಿದು ನನ್ನ ಕತ್ತನ್ನು ಹಿಡಿದು ನನ್ನ ಶರ್ಟನ್ನು ಹರಿದು ಹಾಕಿರುತ್ತಾರೆ. ಗುಂಪಿನಲ್ಲಿ ಎಲ್ಲಾ ಆರೋಪಿತರು ನಮ್ಮೆಲ್ಲರಿಗೂ ಹೊಡೆದಿರುತ್ತಾರೆ. ನಮ್ಮ ಊರಿನಿಂದ ಚಾಸಾ 1 ಮತ್ತು 5 ರವರನ್ನು ಒಂದು ಆಟೋದಲ್ಲಿ ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಪೊಲೀಸರು ಆಸ್ಪತ್ರೆಗೆ ಬಂದಿದ್ದು, ನಾವು ದೂರನ್ನು ಅಲ್ಲೇ ನೀಡಿರುತ್ತೇವೆ. ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಚಾಸಾ 1 ಮತ್ತು 5 ರವರನ್ನು ಪ್ರಜ್ವಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಪ್ರಜ್ವಲ್ ಆಸ್ಪತ್ರೆಯಲ್ಲಿ ಚಾಸಾ 1 ರವರಿಗೆ ತಲೆಗೆ ಬ್ಯಾಂಡೇಜ್ ಮಾಡಿರುತ್ತಾರೆ. ಪ್ರಜ್ವಲ್ ಆಸ್ಪತ್ರೆಯಲ್ಲಿ ಚಾಸಾ 5 ರವರಿಗೆ ಹೊಲಿಗೆ ಹಾಕಿ ತಲೆಯ ಭಾಗವನ್ನು ಬ್ಯಾಂಡೇಜ್ ಮಾಡಿರುತ್ತಾರೆ. ಎಂ ಒ 3 ಅನ್ನು ನೋಡಿ ಅದು ತಮ್ಮ ಶರ್ಟ್ ಆಗಿದ್ದು, ಘಟನೆಯ ದಿನ ಆರೋಪಿತರು ಹರಿದು ಹಾಕಿರುವುದಾಗಿ ತಿಳಿಸುತ್ತಾರೆ. ಸಾಕ್ಷಿ ಎಂ ಒ 1 ಮತ್ತು 2 ಅನ್ನು ನೋಡಿ ಸದರಿ ರಿಪೀಸ್ ಪಟ್ಟಿ ಹಾಗೂ ದೊಣ್ಣೆಯಿಂದ ಆರೋಪಿತರು ಹಲ್ಲೆ ಮಾಡಿರುವುದಾಗಿ ತಿಳಿಸುತ್ತಾರೆ.

2. ಮರುದಿನ ಪೊಲೀಸರಿಗೆ ನಾನು ಘಟನಾ ಸ್ಥಳವನ್ನು ತೋರಿಸಿದ್ದು, ಪೊಲೀಸರು ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿ ಪಂಚನಾಮೆಯನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಪಂಚನಾಮೆಯನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1 (ಎ) ಎಂದು ಗುರುತಿಸಲಾಗಿದೆ. ಪೊಲೀಸರು ನಿಪಿ1 ರಂತೆ ಪಂಚನಾಮೆಯನ್ನು ಬೆಳಗಿನ 7.30 ರಿಂದ 8.30 ಗಂಟೆಯ ವರೆಗೂ ಮಾಡಿರುತ್ತಾರೆ. ನನ್ನ ಸಮಕ್ಷಮ ಪೊಲೀಸರು ಎಂ ಒ 1 ರಿಂದ 3 ಅನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಿಪಿ 1 ರಲ್ಲಿ

ನನ್ನೊಂದಿಗೆ ಪಂಚರಾಗಿ ಬಸವರಾಜು ಮತ್ತು ಕಾರ್ತಿಕ್ ಸಹಿ ಮಾಡಿರುತ್ತಾರೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ 1 ಮತ್ತು 5 ನೇ ಆರೋಪಿಯನ್ನು ಗುರುತಿಸಿದ್ದು, 2 ಮತ್ತು 3 ನೇ ಆರೋಪಿಯನ್ನು ನೋಡಿದರೆ ಗುರುತಿಸುವುದಾಗಿ ತಿಳಿಸುತ್ತಾರೆ.

3. ಸಾಕ್ಷಿ 2 ಫೋಟೋಗಳನ್ನು ನೋಡಿ ಮಹಜರ್ ಮಾಡಿದಾಗ ಘಟನಾ ಸ್ಥಳದಲ್ಲಿ ತೆಗೆದಿದ್ದು, ಅದರಲ್ಲಿ ನಾನು ಚಾಸಾ 10 ಮತ್ತು 11 ಇದ್ದೆವು ಎಂದು ನುಡಿಯುತ್ತಾರೆ. ಸದರಿ ಪೋಟೋಗಳನ್ನು ನಿಪಿ 2 ಮತ್ತು 3 ಎಂದು, 65(ಬಿ) ಪ್ರಮಾಣ ಪತ್ರ ಹಾಗೂ ಸಿಡಿ ಇಲ್ಲದ ಕಾರಣ ಆರೋಪಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ಗುರುತಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

**ಪಾಟೀ ಸವಾಲು : ಎ ಪಿ ಪಿ ರವರಿಂದಃ**

4. ಗಲಾಟೆ ದಿಃ 29.03.2017 ರಂದು ಸಂಜೆ 5.30 ಗಂಟೆಗೆ ಆಗಿರುತ್ತದೆ ಎಂದರೆ ಸರಿ. ಪೊಲೀಸರು ಮಹಜರ್ ಅನ್ನು ಮಾಡಿದಾಗ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲು : ಆರೋಪಿ ಪರ : ಶ್ರೀ ಸಿ ಪಿ ಎಂ ವಕೀಲರಿಂದಃ

5. ನಾನು ಪೊಲೀಸರಿಗೆ ಹೇಳಿಕೆ ನೀಡಿದಾಗ ನನ್ನ ಪತ್ನಿ ಕಸ ಬಿಸಾಡಲು ಹೋದಾಗ ಗಲಾಟೆಯನ್ನು ನೋಡಿದ್ದು, ಅದನ್ನು ನಮಗೆ ತಿಳಿಸಿರುತ್ತಾರೆ ಎಂದು ಹೇಳಿರುತ್ತೇನೆ.

6. ನಾನು ಮತ್ತು ಚಾಸಾ 2, 4 ರಿಂದ 6 ಕೆಳಗೆ ಹೋಗಿ ಸಮಾಧಾನ ಮಾಡಿ ನನ್ನ ಭಾವನಾದ ಚಾಸಾ 1 ರವರನ್ನು ಮನೆಗೆ ಕರೆದುಕೊಂಡು ಬಂದಿರುತ್ತೇನೆ ಎಂದು ನಾನು ಪೊಲೀಸರ ಹೇಳಿಕೆಯಲ್ಲೂ ಸಹ ತಿಳಿಸಿರುತ್ತೇನೆ. ಅದೇ ರೀತಿ ಅದೇ ದಿನ ಆರೋಪಿತರೆಲ್ಲರು

ಏಕಾಏಕಿ ನಮ್ಮ ಮನೆಯ ಹೊರಗಡೆ ಬಂದು ನಾವೆಲ್ಲರೂ ಹೊರಗಡೆ ಇದ್ದು, 2 ನೇ ಆರೋಪಿ ನಂಜುಂಡ ನನ್ನ ಭಾವನ ತಲೆಗೆ ರಿಪೀಸ್ ಪಟ್ಟಿಯಿಂದ ಹೊಡೆದಿದ್ದು, ನಂತರ 2 ನೇ ಆರೋಪಿ ನಂಜುಂಡ ನನ್ನ ಅಕ್ಕನ ಮಗ ನಿತೀನ್ ಗೆ ರಿಪೀಸ್ ಪಟ್ಟಿಯಿಂದ ಅವನ ತಲೆಗೆ ಹೊಡೆದಿದ್ದು, ಚಾಸಾ 1 ರವರಿಗೆ ತಲೆಗೆ ಪೆಟ್ಟಾಗಿ ರಕ್ತ ಬಂದಿದ್ದು, ಚಾಸಾ 5 ರವರಿಗೆ ತಲೆಗೆ ಪೆಟ್ಟಾಗಿ ತಲೆ ಒಪನ್ ಆಗಿದ್ದು ಹಾಗೂ ತೀವ್ರ ಗಾಯವಾಗಿ ರಕ್ತ ಬಂದಿದೆ ಎಂದು ಮತ್ತು 1 ನೇ ಆರೋಪಿ ನಾಗೇಂದ್ರ ನನ್ನ ತಾಯಿಯನ್ನು ಕಾಲಿನಿಂದ ಒದ್ದಿದ್ದು, 1 ನೇ ಆರೋಪಿ ಮತ್ತು 3 ನೇ ಆರೋಪಿ ನನ್ನ ಕುತ್ತಿಗೆ ಪಟ್ಟಿ ಹಿಡಿದು ನನ್ನ ಕತ್ತನ್ನು ಹಿಡಿದು ನನ್ನ ಶರ್ಟನ್ನು ಹರಿದು ಹಾಕಿರುತ್ತಾರೆ ಎಂದು ಹಾಗೂ ಗುಂಪಿನಲ್ಲಿ ಎಲ್ಲಾ ಆರೋಪಿತರು ನಮ್ಮೆಲ್ಲರಿಗೂ ಹೊಡೆದಿರುತ್ತಾರೆ ಎಂದು ನಾನು ನನ್ನ ಹೇಳಿಕೆಯಲ್ಲಿ ಪೊಲೀಸರಿಗೆ ತಿಳಿಸಿರುತ್ತೇನೆ.

7. ನಮ್ಮ ಮನೆಯಿಂದ ಅರಳಿಕಟ್ಟೆ ಅರ್ಧ ಫರ್ಲಾಂಗ್ ಅಂತರದಲ್ಲಿದೆ. ಪೊಲೀರು ನನ್ನ ಮನೆಯ ಮುಂದೆ ಮಹಜರ್ ಮಾಡಿ ಅಶ್ವಥ್ ಕಟ್ಟೆಯ ಹತ್ತಿರ ಹೋಗಿ ನೋಡಿಕೊಂಡು ಬಂದಿರುತ್ತಾರೆ. ಎಂ ಒ 1 ಮತ್ತು 2 ರಿಪೀಸ್ ಹಾಗೂ ದೊಣ್ಣೆಯನ್ನು ಪೊಲೀಸರು ನಮ್ಮ ಮನೆಯ ಹತ್ತಿರ ಇದ್ದದ್ದನ್ನು ತೆಗೆದುಕೊಂಡಿರುತ್ತಾರೆ. ಆರೋಪಿತರು ಯಾವುದೇ ಗಲಾಟೆಯನ್ನು ಮಾಡಿರುವುದಿಲ್ಲ, ನಮ್ಮ ಮನೆ ಬಳಿ ಬಂದಿರುವುದಿಲ್ಲ, ಯಾರಿಗೂ ಕೈ, ಕಾಲು ಹಾಗೂ ಮುದ್ದೆಮಾಲುಗಳಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು 2 ನೇ ಆರೋಪಿಗೆ 7 ಸಾವಿರ ಹಣ ನೀಡಬೇಕಿದ್ದು, ಅದನ್ನು ಕೇಳಲು ಹೋದಾಗ ಚಾಸಾ 1 ಮತ್ತು ಅವರ ಮಗ ಚಾಸಾ 5 ದಿಃ 29.03.2017 ರಂದು ಸಂಜೆ 5.30 ಗಂಟೆಗೆ 2 ನೇ ಆರೋಪಿಯ ಮೇಲೆ ಸೌದೆಯಿಂದ ಹಲ್ಲೆ ಮಾಡಿರುತ್ತಾರೆ. 2 ನೇ ಆರೋಪಿಯ ತಲೆಗೆ ತೀವ್ರ ಪೆಟ್ಟಾಗಿದ್ದು, ಅದಕ್ಕೆ ಅವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ದೂರು ನೀಡುವಷ್ಟರಲ್ಲಿ ನಾವೇ ಸಣ್ಣ ಪುಟ್ಟ ಗಾಯಗಳು ಸ್ವಯಂ ಮಾಡಿಕೊಂಡು ಆರೋಪಿತರ

ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ಹಲ್ಲೆಯ ಹಿನ್ನೆಲೆಯಲ್ಲಿ ಅದೇ ದಿನ ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ಮತ್ತು 5 ರವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದೂರಿನ ಆಧಾರದ ಮೇಲೆ ಅಂತಿಮ ವರದಿಯನ್ನು ಚಾಸಾ 1 ಮತ್ತು 5 ರವರ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಕೇಸ್ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಶ್ರೀರಂಗಪಟ್ಟಣ ಅವರ ಮುಂದೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ನನ್ನ ಭಾವ ನಾಗೇಂದ್ರ ಮರಣ ಹೊಂದಿದ ಕಾರಣ ಅದು ಮುಕ್ತಾಯವಾಗಿರುತ್ತದೆ ಎಂದರೆ ಸರಿ. ಚಾಸಾ 5 ರವರ ವಿರುದ್ಧ ಜೆ ಜೆ ಬೋರ್ಡ್‌ನ ಮುಂದೆ ಇದ್ದ ಕೇಸ್ ಮುಕ್ತಾಯವಾಗಿರುತ್ತದೆ ಎಂದರೆ ಸರಿ.

8. ಸರ್ಕಾರಿ ಆಸ್ಪತ್ರೆಯಿಂದ ಮೈಸೂರು ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಹೋಗಿ ಎಂದು ಸರ್ಕಾರಿ ಆಸ್ಪತ್ರೆಯ ವೈದ್ಯರು ಯಾವುದೇ ಲಿಖಿತ ದಾಖಲಾತಿಯನ್ನು ನೀಡಿರುವುದಿಲ್ಲ. ಸರ್ಕಾರಿ ಆಸ್ಪತ್ರೆಗೆ ನಾವು ಹೋದಾಗ ಯಾವುದೇ ಗಾಯಗಳು ಆಗದೇ ಇರುವ ಕಾರಣಕ್ಕೆ ಯಾವುದೇ ಪ್ರಮಾಣ ಪತ್ರವನ್ನು ನೀಡುವುದಿಲ್ಲ ಎಂದು ಹೇಳಿದ್ದಕ್ಕೆ ನಾವು ಖಾಸಗಿ ಆಸ್ಪತ್ರೆಗೆ ಹೋಗಿದ್ದೇವೆ ಎಂದರೆ ಸರಿಯಲ್ಲ. ನಮಗೆ ಯಾವುದೇ ಗಾಯಗಳು ಆಗದೇ ಇದ್ದರೂ ಸಹ ಖಾಸಗಿ ಆಸ್ಪತ್ರೆಯ ವೈದ್ಯರೊಂದಿಗೆ ಶಾಮೀಲಾಗಿ ನಾನು ಸುಳ್ಳು ಗಾಯದ ಪ್ರಮಾಣ ಪತ್ರಗಳನ್ನು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆಯಾಗಿರುವುದಿಲ್ಲ. ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿರುವುದಿಲ್ಲ ಹಾಗೂ ನಮಗೆ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಎಂ ಒ 1 ದೊಣ್ಣೆಯಾ ಅಥವಾ ಕಡ್ಡಿಯಾ ಎಂದರೆ ಸಾಕ್ಷಿ ಅದು ದೊಣ್ಣೆ ಅದಕ್ಕೆ ಕುಟ್ಟೆಯಾಗಿದ್ದು, ಅದು ಸಣ್ಣವಾಗಿದೆ ಎಂದು ನುಡಿಯುತ್ತಾರೆ. ಎಂ ಒ 1 ಕಡ್ಡಿಯಾಗಿದ್ದು, ನಾವು ಎಲ್ಲೋ ಬಿದ್ದಿರುವುದನ್ನು ತಂದು ಪೊಲೀಸರಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಎಂ ಒ 2 ರಿಪೀಸ್ ಪಟ್ಟಿ ಅಲ್ಲ

ಕಿಟಕಿಗೆ ಅಳವಡಿಸುವ ಪಟ್ಟಿ ಎಂದರೆ ಸರಿಯಲ್ಲ. ನಾವು ಮನೆಯಲ್ಲಿದ್ದ ಮರದ ತುಂಡನ್ನು ತಂದು ಪೊಲೀಸರಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಮನೆಯಲ್ಲಿದ್ದ ಎಂ ಒ 3 ಹರಿದ ಶರ್ಟನ್ನು ಪೊಲೀಸರಿಗೆ ನೀಡಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಯಲ್ಲ.

9. ನಮ್ಮ ಹಾಗೂ ಆರೋಪಿತರ ಮನೆ ಅಕ್ಕಪಕ್ಕದಲ್ಲಿದೆ ಎಂದರೆ ಸರಿ. ಆರೋಪಿತರು ಹಾಗೂ ನಮ್ಮಗಳ ನಡುವೆ ಸಣ್ಣಪುಟ್ಟ ವಿಚಾರಕ್ಕೆ ವೈಮನಸ್ಸು ಇತ್ತು ಎಂದರೆ ಸಾಕ್ಷಿ ಗಲಾಟೆಯಾದ ನಂತರ ನಮ್ಮ ನಡುವೆ ಭಿನ್ನಾಭಿಪ್ರಾಯ ಇದೆ ಎಂದು ನುಡಿಯುತ್ತಾರೆ. ಮೊದಲಿನಿಂದಲೂ ನಾವು ಆರೋಪಿತರೊಂದಿಗೆ ಸಣ್ಣ ಪುಟ್ಟ ವಿಚಾರಕ್ಕೆ ಗಲಾಟೆ ಮಾಡಿಕೊಂಡಿದ್ದು, ಅದರ ಹಗೆಯನ್ನು ಸಾಧಿಸಲು ನಾವು ಸುಳ್ಳು ದೂರನ್ನು ನೀಡಿದ್ದೆವೇ ಹಾಗೂ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಭಾವ ಮತ್ತು ಭಾವನ ಮಗ 2 ನೇ ಆರೋಪಿಗೆ ಹಲ್ಲೆ ಮಾಡಿದ್ದು, ಅದರಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.
ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.